ಉದಯಕಾಲ

ಅರಸುರಂತೆ ಸಿದ್ದರಾಮಯ್ಯರನ್ನು ಕೆಳಗಿಳಿಸುವ ಷಡ್ಯಂತ್ರ: ಮಾಜಿ ಸಚಿವ ಎಚ್.ಎಂ.ರೇವಣ್ಣ

ಉದಯಕಾಲ ನ್ಯೂಸ್

ಮಾಗಡಿ: ಅಂದು ಹಿಂದುಳಿದ ವರ್ಗಗಳ ಸರ್ವೋಚ್ಚ ನಾಯಕ ಡಿ.ದೇವರಾಜ ಅರಸು ಅವರ ಆಡಳಿತವನ್ನು ಸಹಿಸದ ವಿರೋಧ ಪಕ್ಷದವರು ಅಧಿಕಾರದಿಂದ ಇಳಿಸಲು ಮುಂದಾದಂತೆ ಇಂದು ಮುಡಾ ಹಗರಣ ಎಂಬ ಹೆಸರಿನಲ್ಲಿ ಜನಪರ ಆಡಳಿತಗಾರ ಸಿಎಂ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಬಿಜೆಪಿ–ಜೆಡಿಎಸ್ ಪಕ್ಷದವರು ಮುಂದಾಗಿದ್ದಾರೆ. ಆದರೆ, ಅವರ ಪ್ರಯತ್ನ ಸಫಲವಾಗುವುದಿಲ್ಲ ಎಂದು ಮಾಜಿ ಸಚಿವ ಎಚ್.ಎಂ.ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ವಿಚಾರವಾಗಿ ವಿರೋಧ ಪಕ್ಷದವರ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಪ್ರಧಾನಿ ಮೋದಿ, ಅಮಿತ್ ಶಾ ಅವರುಗಳಿಗೆ ಎದುರಾಳಿಯಾಗಿ ನಿಂತುಕೊಂಡು, ಜನಪರ ಆಡಳಿತವನ್ನು ನಡೆಸುತ್ತಿರುವ ಹಿಂದುಳಿದ ನಾಯಕರಾದ ಸಿದ್ದರಾಮಯ್ಯ ಅವರನ್ನು ಕಟ್ಟಿ ಹಾಕುವ ಹುನ್ನಾರ ಎಂದು ತಿಳಿಸಿದರು.

ಮುಡಾ ಹಗರಣದ ವಿಚಾರದಲ್ಲಿ ಯಾವುದೇ ತಿರುಳಿಲ್ಲ. ಯಾವುದೇ ಜಮೀನನ್ನು ಕಳೆದುಕೊಳ್ಳದ ದೇವೇಗೌಡರ ಕುಟುಂಬಕ್ಕೆ ಮುಡಾದಿಂದ 84 ನಿವೇಶನಗಳನ್ನು ಹಂಚಿಕೆಯಾಗಿರುವ ಬಗ್ಗೆ ದಾಖಲೆ ಇದೆ. ಮುಡಾ ವಿಚಾರದಲ್ಲಿ ರಾಜ್ಯಪಾಲರನ್ನು ಉಪಯೋಗಿಸಿಕೊಂಡು ಮೋದಿ ಮತ್ತು ಅಮಿತ್ ಶಾ ಆಟವಾಡುತ್ತಿದ್ದಾರೆ. ಇದು ರಾಜಕೀಯ ಪ್ರೇರಿತ ಇವತ್ತಲ್ಲ ನಾಳೆ ಕುಮಾರಸ್ವಾಮಿಯವರ ಹಗರಣ ಹೊರಗಡೆ ಬರುತ್ತೆ. ಅವರು ಜೈಲಿಗೆ ಹೋಗುವುದು ಶತಿಸಿದ್ಧ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ರಾಜೇಂದ್ರ, ಪಾಲ್ ಸಿಂಗ್, ಶಿವರಾಮ್, ಪ್ರಗತಿಪರ ರೈತ ಕುಂಬಳಕಾಯಿ ಗಂಗಣ್ಣ, ತೇಜಸ್ ಕುಮಾರ್, ವಿಜಯ್ ಸೇರಿದಂತೆ ಅನೇಕರಿದ್ದರು.

ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭೆ

ಉದಯಕಾಲ ನ್ಯೂಸ್

ರಾಮನಗರ: ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ, ಅಗತ್ಯ ಕೌನ್ಸೆಲಿಂಗ್ ನೀಡುವಂತೆ ಜಿಲ್ಲಾಧಿಕಾರಿ ಯಂಶವತ್ ವಿ.ಗುರುಕರ್ ಅವರು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಮತ್ತು ಜಿಲ್ಲಾ ಕೋಶ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಮಗಳಲ್ಲಿ ಬಾಲ್ಯ ವಿವಾಹಗಳು ಗುಪ್ತವಾಗಿ ನಡೆಯುವುದರಿಂದ ಕೆಲವೊಮ್ಮೆ ಅಧಿಕಾರಿಗಳಿಗೆ ಅದು ತಿಳಿಯುವುದು ತಡವಾಗುತ್ತದೆ, ಆ ರೀತಿಯ ಸಂದರ್ಭಗಳು ಎದುರಾಗುವ ಮೊದಲೇ ಶಾಲೆಗಳಲ್ಲಿ ಹೆಚ್ಚು ದಿನ ಗೈರು ಹಾಜರಾದ ಬಾಲಕಿಯರ ಬಗ್ಗೆ ಶಾಲೆಯ ಮುಖ್ಯೋಪಾಧ್ಯಾಯರು ಗಮನ ಹರಿಸುತ್ತಿರಬೇಕು ಎಂದು ಹೇಳಿದರು.

ಸಮಾಜದಲ್ಲಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸರ್ಕಾರ ನೀಡುವ ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸಬೇಕು. ಇತರೆ ಸಂಘ ಸಂಸ್ಥೆಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದು, ಅವರ ಮುಖಾಂತರ ಯೋಜನೆಗಳನ್ನು ದಮನಿತ ಮಹಿಳೆಯರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ರಾಮನಗರ ಜಿಲ್ಲೆಯಲ್ಲಿ 181 ಮಹಿಳಾ ಸಹಾಯವಾಣಿಯ ಮೂಲಕ ಏಪ್ರಿಲ್–2024 ರಿಂದ ಜುಲೈ ಅಂತ್ಯಕ್ಕೆ 8 ಕರೆಗಳು ಸ್ವೀಕೃತವಾಗಿದ್ದು, ಈ ಪ್ರಕರಣಗಳಿಗೆ ಪೊಲೀಸ್ ನೆರವು, ಕಾನೂನು ನೆರವು, ಆಪ್ತ ಸಮಾಲೋಚನೆ ಸೇವೆಯನ್ನು ಒದಗಿಸಲಾಗಿದೆ ಎಂದರು.

ಎಚ್.ಐ.ವಿ ಸೋಂಕಿತ ಮಹಿಳೆಯರಿಗೆ ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಧನಶ್ರೀ ಯೋಜನೆಯಡಿ ಆರ್ಥಿಕ ಚಟುವಟಿಕೆ ನಡೆಸಲು ಮಹಿಳಾ ಅಭಿವೃದ್ಧಿ ನಿಗಮದಿಂದ ಪ್ರೋತ್ಸಾಹ ಧನ ಸೌಲಭ್ಯ ನೀಡಲಾಗುತ್ತಿದೆ ಅದರ ಸದುಪಯೋಗ ಪಡೆಯುವಂತೆ ತಿಳಿಸಿದರು.

BEFORE THE ASSISTANT COMMISSIONER,RAMANAGARA SUB DIVISION, AT RAMANAGARA.
RA.No.185/2024-25
Appellants: Sri. Byregowda and others.
V/S
Respondents: Sri. Abudul Sab and another.

NOTICE TO THE RESPONDENT NO.1 R-1. Sri.Abdul Sab S/o Gouse Sab, R/at Kodihalli Village, Kodihalli Hobli, Kanakapura Taluk, Ramanagara District.

WHEREAS, the appellants have filed the above appeal praying for order to effect katha of the landed property bearing Sy.No.138/1 (Old Sy.No.8), measuring to an extent of 3.04.08 Acres, situated at Marasarahalli Village, Maralawadi Hobli, Harohalli Taluk, Ramanagara District, The above mentioned as per the registered sale deeds. respondent No.1 is hereby directed to appear either personally or through his pleader on 09/09/2024 the date fixed by the Hon'ble court, failing which the matter will be heard expartae.

SCHEDULE

Landed property bearing Sy.No.138/1 (Old Sy.No.8), measuring to an extent of 3.04.08 Acres, situated at Marasarahalli Village, Maralawadi Hobli, Harohalli Taluk, Ramanagara District.

Issued under my hand and the seal of this court, on this 28th day of August 2024.

Assistant Commissioner
Ramanagara sub division
Ramanagara

ಕೃಷಿಕರನ್ನು ಒಕ್ಕಲೆಬ್ಬಿಸಿದರೆ ಹುಷಾರ್: ಪ್ರಸನ್ನಗೌಡ ಎಚ್ಚರಿಕೆ

ರೈತರ ಜಮೀನು ನಿವೇಶನಗಳಿಗೆ ಬಳಕೆಯನ್ನು ಖಂಡಿಸಿ ಪ್ರತಿಭಟನೆ

ಉದಯಕಾಲ ನ್ಯೂಸ್

ಚನ್ನಪಟ್ಟಣ: ರೈತರು ದಶಕಗಳಿಂದಲೂ ಇಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ. ಯಾವುದೇ ಕಾರಣಕ್ಕೂ ಅವರನ್ನು ಒಕ್ಕಲೆಬ್ಬಿಸಲು ಬಿಡುವುದಿಲ್ಲ, ರೈತರ ಪರವಾಗಿ ಉಪವಾಸ ಸತ್ಯಾಗ್ರಹವನ್ನು ಬೇಕಾದರು ಮಾಡುತ್ತೇವೆ ಎಂದು ಜೆಡಿಎಸ್ ಮುಖಂಡ ಪ್ರಸನ್ನ ಪಿ.ಗೌಡ ಗುಡುಗಿದರು.

ತಾಲೂಕಿನ ಬುಕ್ಕಸಾಗರ ಗ್ರಾಮದಲ್ಲಿ ರೈತರನ್ನು ಒಕ್ಕಲೆಬ್ಬಿಸಿ, ಬಡವರಿಗೆ ನಿವೇಶನ ಹಂಚಲು ಹೊರಟಿರುವ ತಾಲೂಕು ಆಡಳಿತದ ಧೋರಣೆ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಮ್ಮ ಗ್ರಾಮದಲ್ಲಿ ಸಾಗುವಳಿ ಮಾಡುತ್ತಿರುವ ರೈತರನ್ನು ಜಮೀನುಗಳಿಂದ ಒಕ್ಕಲೆಬ್ಬಿಸುತ್ತಿರುವುದನ್ನು ಯಾವುದೇ ಕಾರಣಕ್ಕು ಸಹಿಸಲು ಸಾಧ್ಯವಿಲ್ಲ, ಇದರ ವಿರುದ್ಧ ಸ್ಥಳೀಯ ಗ್ರಾಮಸ್ಥರೊಡಗೂಡಿ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸುತ್ತೇವೆ ಎಂದು ಹೇಳಿದರು.

ದಶಕಗಳಿಂದ ಸಾಗುವಳಿ ಮಾಡಿಕೊಂಡು ಬಂದ ಜಮೀನನ್ನು ಯಾವುದೇ ಕಾರಣಕ್ಕೂ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ. ಈ ವಿಚಾರದಲ್ಲಿ ಪಕ್ಷಾತೀತವಾಗಿ ಎಲ್ಲರೂ ಹೋರಾಟ ಮಾಡಬೇಕು. ಗ್ರಾಮಸ್ಥರೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಿದಾಗ ಮಾತ್ರ, ನಮಗೆ ಜಯ ಸಿಗುತ್ತದೆ. ರೈತರನ್ನು ಒಕ್ಕಲೆಬ್ಬಿಸುವ ಕೆಲಸವನ್ನು ಉಪಮುಖ್ಯಮಂತ್ರಿಯಾದ ಡಿ.ಕೆ.ಶಿವಕುಮಾರ್ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಜಮೀನುಗಳಲ್ಲಿ ನಮ್ಮ ಸ್ಥಳೀಯ ರೈತರು ದಶಕಗಳಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ. ಆದರೂ ಕೂಡ ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಸರ್ಕಾರ ಈ ಜಮೀನುಗಳನ್ನು ಗೋಮಾಳ ಎಂದು ಪಹಣಿಯಲ್ಲಿ ಕೂರಿಸಿದೆ. ಈಗಾಗಲೇ ಇಲ್ಲಿ ತೆಂಗು, ಟಮೋಟೋ, ಮಾವು ಬೆಳೆಯಲಾಗಿದ್ದು ಅದನ್ನು

ತೆರವು ಮಾಡಬೇಕೆಂದು ಒತ್ತಾಯಿಸಿದ್ದು ಸರಿಯಲ್ಲ ಎಂದು ಆಡಳಿತದ ವಿರುದ್ಧ ಕಿಡಿಕಾರಿದರು. ಡಿಕೆ ಶಿವಕುಮಾರ್ ಅವರೇ ಸಿಎಂ ಆಗುವ ಕನಸು ಕಾಣುತ್ತಿದ್ದೀರಾ?, ರೈತರನ್ನು ಒಕ್ಕಲೆಬ್ಬಿಸುವ ಕಾರಣದ ಬಗ್ಗೆ ಪರಿಜ್ಞಾನ ಇರಬೇಕು. ಇದು ಹಳ್ಳದ ಜಾಗವಾಗಿದ್ದು ಇಲ್ಲಿ ನಿವೇಶನ ಮಾಡಲು ಸಾಧ್ಯನಾ?, ಊರಿನ ಮಧ್ಯೆ ಭಾಗದಲ್ಲಿ ಜಾಗವನ್ನು ಗುರುತಿಸಿ, ಅಲ್ಲಿ ನಿವೇಶನ ಮಾಡಿ, ಅದನ್ನ ಬಿಟ್ಟು ರೈತರನ್ನು ಒಕ್ಕಲಿಲೆಬ್ಬಿಸುವ ಕ್ರಮ ಸರಿಯಲ್ಲ ಎಂದು ಗುಡುಗಿದರು. ಮೊದಲು ಸುಳ್ಳಿನ ಭರವಸೆ ನೀಡಿ ಜನರನ್ನ ಮರಳು ಮಾಡಿದಂತೆ ಈಗ ನಡೆಯುವುದಿಲ್ಲ. ಈ ತಪ್ಪು ಕಲ್ಪನೆಯಿಂದ ಹೊರ ಬನ್ನಿರಿ, ರೈತರ ವಿಚಾರದಲ್ಲಿ ನಾವು ಯಾವುದೇ ಹೋರಾಟಕ್ಕೆ ಸಿದ್ಧರಿದ್ದೇವೆ. ಉಪವಾಸ ಸತ್ಯಾಗ್ರಹವನ್ನು ಮಾಡಲು ಸಿದ್ಧರಿದ್ದೇವೆ. ಯಾವುದೇ ಕಾರಣಕ್ಕೂ ನಮ್ಮ ಹೋರಾಡ ಬಿಡಲ್ಲ ಎಂದು ಅವರು ಆಕ್ರೋಶ ಹೊರಹಾಕಿದರು. ಈ ಹೋರಾಟಕ್ಕೆ ಎಲ್ಲರೂ ಪಕ್ಷಾತೀತವಾಗಿ ಬೆಂಬಲ ನೀಡಬೇಕು. ನೀವು ಒಗ್ಗಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಜಯ ಸಿಗುತ್ತದೆ. ಗ್ರಾಮಸ್ಥರು ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕು. ಯಾವುದೇ ಸಂದರ್ಭವಿರಲಿ ನಾನು ಸದಾ ನಿಮ್ಮ ಜೊತೆ ಇರುತ್ತೇನೆ. ಜೊತೆಯಲ್ಲಿ ನಮ್ಮ ರೈತ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು ಇವೆ ಎಂದು ಗ್ರಾಮಸ್ಥರಿಗೆ ಧೈರ್ಯ ತುಂಬಿದರು.

ಪ್ರತಿಭಟನೆಯಲ್ಲಿ ನೂರಾರು ರೈತರು, ರೈತ ಮಹಿಳೆಯರು ಪಾಲ್ಗೊಂಡಿದ್ದರು.

ಉತ್ತಮ ಸಮಾಜ ನಿರ್ಮಾಣಕ್ಕೆ ಕೃಷ್ಣನ ಬೋಧನೆ ಪಾಲಿಸಿ

ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಶಾಸಕ ಶರತ್ ಬಚ್ಚೇಗೌಡ ಕರೆ

ಉದಯಕಾಲ ನ್ಯೂಸ್

ಹೊಸಕೋಟೆ: ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಬೋಧನೆ ಮಾಡಿದ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಶಾಸಕ ಶರತ್ ಬಚ್ಚೇಗೌಡ ಹೇಳಿದರು.

ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತ ಮತ್ತು ಯಾದವ ಸಂಘದಿಂದ ಏರ್ಪಡಿಸಿದ್ದ ಶ್ರೀಕೃಷ್ಣ ಜನ್ಮಾಷ್ಟಮಿ ಭಾಗವಹಿಸಿ ಅವರು ಮಾತನಾಡಿದರು.

ನಾವು ಆರಾಧನೆ ಮಾಡುವುದು ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಅದಕ್ಕೆ ಕಾರಣ ಸೃಷ್ಟಿ ಎಂದರೆ ಬ್ರಹ್ಮ, ಸ್ಥಿತಿ ಎಂದರೆ ವಿಷ್ಣು, ಲಯ ಎಂದರೆ ಮಹೇಶ್ವರ ಸ್ಥಿತಿಯಲ್ಲಿರುವ ವ್ಯವಸ್ಥೆ ಕಡೆಯಲ್ಲಿ ಅಂತ್ಯವಾಗುತ್ತದೆ. ಸೃಷ್ಟಿ ಸಹಜವಾಗಿ ಮಾಡಬಹುದು, ಲಯ ಮತ್ತು ವಿನಾಶ ಮಾಡುವಂತದ್ದು ಇನ್ನು ಸುಲುಭ ಆದರೆ, ಸ್ಥಿತಿ ವ್ಯವಸ್ಥೆಯನ್ನು ಕಾಪಾಡುವುದು ಕಷ್ಟವಾದದ್ದು. ಕೃಷ್ಣನ ಬೋಧನೆಗಳು ನಾವು ಪಾಲನೆ ಮಾಡಿದರೆ ಸುಸಂಸ್ಕೃತ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಹಾಕಿದಂತಾಗುತ್ತದೆ ಎಂದರು.

ಮಾಜಿ ಜಿ.ಪಂ ಅಧ್ಯಕ್ಷ ವಿ.ಪ್ರಸಾದ್ ಮಾತನಾಡಿ, 5 ಸಾವಿರ ವರ್ಷಗಳ ಹಿಂದೆ ಶ್ರೀಕೃಷ್ಣ ಈ ಭೂಮಿಯಲ್ಲಿ ಅವತರಿಸಿ 106 ವರ್ಷಗಳ ಕಾಲ ಬದುಕಿ, ಅಧರ್ಮವನ್ನು ಹೋಗಲಾಡಿಸಿ ಧರ್ಮ ಸಂಸ್ಥಾಪನೆ ಮಾಡಿ ತನ್ನೆಲ್ಲಾ ಅವತಾರಗಳ ಮೂಲಕ ಇಡಿ ಪ್ರಪಂಚದಲ್ಲಿ ಸದ್ಗುಣ ಮತ್ತು ಸದ್ಭಾವನೆಗಳನ್ನು ಮೂಡಿಸಿದ್ದು ಮಹಾನ್ ಶ್ರೀಕೃಷ್ಣ ಎಂದು ಹೇಳಿದರು.

ತ್ರೇತಾಯುಗದಲ್ಲಿ ಅಧಃಪತನದತ್ತ ಸಾಗುತ್ತಿದ್ದ ಧರ್ಮವನ್ನು ಸಂಸ್ಥಾಪನೆ ಮಾಡುವ ಸಲುವಾಗಿ ಆಕಾಲದಲ್ಲಿ ರಾಜರುಗಳ ಮಧ್ಯೆ ಇದ್ದಂತಹ ದ್ವೇಷ ಅಸೂಯೆಯನ್ನು ಹೋಗಲಾಡಿಸಿ ಮತ್ತು ಪ್ರಪಂಚದಲ್ಲಿದ್ದಂತ ಅಧರ್ಮವನ್ನು ಅಳಿಸಿ ಹಾಕಲು ಕೃಷ್ಣನ್ನು ಅನೇಕ ಅವತಾರಗಳಲ್ಲಿ ಹುಟ್ಟಿಬರಬೇಕಾಯಿತು. ತದನಂತರ ರಾಕ್ಷಸರನ್ನು ಸಂಹಾರ ಮಾಡಲು ಶಾಂತಿ ನೆಲೆಸಲು ಕೃಷ್ಣ ತುಂಬಾ ಶ್ರಮೀಸಿದ್ದನು ಎಂದು ಪ್ರಸಾದ್ ಹೇಳಿದರು.

ತಹಶೀಲ್ದಾರ್ ನರೇಂದ್ರಬಾಬು ಅವರು ಮಾತನಾಡಿ, ಭಗವಾನ್ ಶ್ರೀಕೃಷ್ಣ ಹುಟ್ಟಿದ ದಿನವನ್ನು ಗೋಕುಲಾಷ್ಟಮಿ ಎಂದು ಭಾರತಾದ್ಯಂತ ಆಚರಣೆ ಮಾಡಲಾಗುತ್ತದೆ. ಶ್ರೀಕೃಷ್ಣ ಹಿಂದೂ ದೇವತೆಗಳ ಶ್ರೇಣಿಯಲ್ಲಿ ಅತ್ಯಂತ ಮಹತ್ವ ಪೂರ್ಣ ನಾಯಕರಾಗಿದ್ದಾರೆ. ಶ್ರೀಕೃಷ್ಣನನ್ನು ಭಗವಾನ್ ವಿಷ್ಣುವಿನ ಅವತಾರ ಎಂದು ಕರೆಯುತ್ತಾರೆ ಸಾಮಾನ್ಯವಾಗಿ ಶ್ರೀಕೃಷ್ಣನಿಗೆ ಭಕ್ತಿಗಿಂತಲೂ ಸದರವೆ ಹೆಚ್ಚು ಎಂದರು.

ಈ ಸಂದರ್ಭದಲ್ಲಿ ಯಾದವ ಸಮುದಾಯದ ಭವನ ನಿರ್ಮಾಣ ಮತ್ತು ಹಾಸ್ಟೆಲ್ ನಿರ್ಮಾಣಕ್ಕೆ 20 ಗುಂಟೆ ಜಮೀನು ಸರ್ಕಾರ ನೀಡಿದೆ. ಅಲ್ಲಿ ಭವ್ಯ ಕಟ್ಟಡ ನಿರ್ಮಾಣವಾಗಿದ್ದು, ಕಳೆದ ಸಾಲಿನಲ್ಲಿ ಶಾಸಕರಿಗೆ ಖಾಯಂ ಮಂಜೂರಾತಿಗೆ ಮನವಿ ಮಾಡಿದ್ದೇವು ಅದು ಸರ್ಕಾರದ ಪ್ರಸ್ತಾವನೆಯಲ್ಲಿ ಇದೆ ಜೊತೆಗೆ ಉಳಿಕೆ ಕಾಮಗಾರಿ ಕೈಗೊಳ್ಳಲು 50 ಲಕ್ಷ ರೂ. ಸರ್ಕಾರದ ನೇರವು ಕೊಡಿಸಬೇಕೆಂದು ಯಾದವ ಸಮುದಾಯ ಮುಖಂಡ ವಿ.ಪ್ರಸಾದ್ ಶಾಸಕರಲ್ಲಿ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಇಓ ಡಾ.ನಾರಾಯಣಸ್ವಾಮಿ, ಬಿಇಓ ಪದ್ಮನಾಭ್, ತಾ.ಕಚೇರಿ ರಾಜೂಗೌಡ, ಯಾದವ ಸಂಘದ ಅಧ್ಯಕ್ಷ ಆನಂದಪ್ಪ, ಮುಖಂಡರಾದ ಯರ್ರೇಗೌಡ, ವೆಂಕಟೇಗೌಡ, ಸಿ.ಮುನಿಯಪ್ಪ, ಸತೀಶ್‌ಗೌಡ, ಬಿ.ವಿ.ಬೈರೇಗೌಡ, ಅನುಪಳ್ಳಿ ಸೀನಪ್ಪ, ಮುನಿಶಾಮಪ್ಪ, ಗೋಪಿ, ಶ್ರೀನಿವಾಸ್, ವೇಣು, ರಾಮೇಗೌಡ, ನೌಕರರ ಸಂಘದ ಅಧ್ಯಕ್ಷ ಮುನಿಶಾಮಪ್ಪ, ಅಲ್ಲಾಭಕ್ಷ್, ಸುಬ್ರಾಯಪ್ಪ, ಗಂಗಾಧರ್ ಸೇರಿದಂತೆ ಇತರೆ ಯಾದವ ಮುಖಂಡರುಗಳು ಹಾಜರಿದ್ದರು.

ಭೌತಶಾಸ್ತ್ರ ಶಿಕ್ಷಕರಿಗಾಗಿ ವಿಶೇಷ ಕಾರ್ಯಗಾರ

ಉದಯಕಾಲ ನ್ಯೂಸ್

ಕನಕಪುರ: ನಗರದ ರೂರಲ್ ಪದವಿ ಕಾಲೇಜು ಹಾಗೂ ಭಾರತ ವಿಜ್ಞಾನ ಸಮಿತಿ ಸಹಯೋಗದೊಂದಿಗೆ ಬುಧವಾರ ಭೌತಶಾಸ್ತ್ರ ಬೋಧಿಸುವ ಶಿಕ್ಷಕರಿಗೆ ಒಂದು ದಿನದ ವಿಶೇಷ ಕಾರ್ಯಗಾರ ನಡೆಸಲಾಯಿತು.

ಕನಕಪುರದ ಎಲ್ಲಾ ಪ್ರೌಢಶಾಲೆಯ ಭೌತಶಾಸ್ತ್ರ ಶಿಕ್ಷಕರಿಗೆ ಪ್ರಾಯೋಗಿಕ ತರಬೇತಿ ನೀಡುವ ಸಲುವಾಗಿ ನಡೆದ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಭಾರತಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ರೇವಣ್ಣ ಮಾತನಾಡಿ, ಶಾಲಾ ಕಲಿಕೆಯು ಕಲಿಕೆಯ ಪ್ರಾಥಮಿಕ ಹಂತವಾಗಿದೆ. ವಿದ್ಯಾರ್ಥಿಗಳನ್ನು ಪ್ರಾಯೋಗಿಕ ಕಾರ್ಯಗಳಲ್ಲಿ ತೊಡಗಿಸಿ ನೂತನ ಕಲಿಕೆಯಲ್ಲಿ ಮಗ್ನರಾಗಿಸಬೇಕಿದೆ. ಭೌತಶಾಸ್ತ್ರದಲ್ಲಿ ಬಳಸುವ ಉಪಕರಣಗಳಾದ ಪ್ರತಿರೋಧ ಪೆಟ್ಟಿಗೆ, ಬಲ್ಬ್, ವೋಲ್ಟ್ ಮೀಟರ್, ಕೆಪಾಸಿಟರ್ಗಳು, ತಂತಿ ಸಂಪರ್ಕ ಸಾಧನಗಳ ಕುರಿತು ಮಕ್ಕಳಿಗೆ ಪ್ರಾಯೋಗಿಕ ತರಗತಿಗಳು ನಡೆದಾಗ ಮಾತ್ರ ಅವರು ಭೌತಶಾಸ್ತ್ರ ವನ್ನು ಆಳವಾಗಿ ಅರಿಯಲು ಸಾಧ್ಯ ಎಂದರು.

ಶಾಲೆಗಳಲ್ಲಿ ರಸಾಯನ ಶಾಸ್ತ್ರ , ಸಸ್ಯ ಶಾಸ್ತ್ರ , ಪ್ರಾಣಿ ಶಾಸ್ತ್ರ ದಲ್ಲಿ ಪದವಿ ಹೊಂದಿರುವ ಶಿಕ್ಷಕರು ಭೌತಶಾಸ್ತ್ರವನ್ನು ಪ್ರಾಯೋಗಿಕವಾಗಿ ಬೋಧಿಸಲು ಕಷ್ಟಸಾಧ್ಯ ಅಂತವರಿಗೆ ಈ ಕಾರ್ಯಗಾರ ಹೆಚ್ಚು ಉಪಯೋಗವಾಗಲಿದೆ ಎಂದು ತಿಳಿಸಿದರು.

ರೂರಲ್ ಪದವಿ ಕಾಲೇಜಿನ ಪ್ರಾಂಶುಪಾಲ ಎಂ.ಟಿ.ಬಾಲಕೃಷ್ಣ ಮಾತನಾಡಿ, ಭೌತ ಶಾಸ್ತ್ರ ಅತೀ ತೀಕ್ಷ್ಣವಾದ ವಿಷಯವಾಗಿದೆ. ಪ್ರತಿ ನಿಮಿಷವೂ ಕೂಡ ಹೊಸತನವನ್ನು ನೀಡುತ್ತಾ ಮಕ್ಕಳಿಗೆ ಕುತೂಹಲ ಉಂಟು ಮಾಡುತ್ತದೆ. ಪ್ರಾಯೋಗಿಕ ತರಗತಿಗಳು ಕುತೂಹಲವನ್ನು ತಣಿಸುವ ಜೊತೆಗೆ ಸಮಗ್ರ ಅಧ್ಯಯನಕ್ಕೆ ದಾರಿ ಮಾಡಿಕೊಡಲಿದೆ ಎಂದರು. ಕಾರ್ಯಾಗಾರದಲ್ಲಿ ಸಂಸ್ಥೆಯ ಕಾರ್ಯದರ್ಶಿ ಪುಟ್ಟಸ್ವಾಮಿ, ಉಪ ಪ್ರಾಂಶುಪಾಲ ಪ್ರೊ.ದೇವರಾಜು, ಪ್ರೊ.ಮನೀಶಾ, ಪ್ರೊ.ಜ್ಯೋತಿ, ಪ್ರೊ.ಎ.ಪಿ.ಪ್ರಕಾಶ್, ಪ್ರೊ.ಪ್ರಸನ್ನ, ಪ್ರೊ.ಮೋಹನ್ ಕುಮಾರ್ ಹಾಜರಿದ್ದರು.

ಹೊಸದುರ್ಗ ಗ್ರಾ.ಪಂ ಅಧ್ಯಕ್ಷರಾಗಿ ಮಧುಸೂದನ್ ಆಯ್ಕೆ

ಉದಯಕಾಲ ನ್ಯೂಸ್

ಕನಕಪುರ: ತಾಲೂಕಿನ ಕೋಡಿಹಳ್ಳಿ ಹೋಬಳಿ ಹೊಸದುರ್ಗ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಎಚ್.ಎಸ್. ಮಧುಸೂದನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬುಧವಾರ ಸಂಘದ ಕಚೇರಿಯಲ್ಲಿ ನಡೆದ ಅಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಚ್.ಎಸ್. ಮಧುಸೂದನ್ ರವರ ಒಂದೇ ನಾಮಪತ್ರ ಸಲ್ಲಿಕೆಯಾಗಿದ್ದರಿಂದ ಇವರು ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಚುನಾವಣೆ ಅಧಿಕಾರಿಗಳು ಘೋಷಿಸಿದರು.

ಈ ಹಿಂದೆ ಅಧ್ಯಕ್ಷರಾಗಿದ್ದ ರಮೇಶ್‌ಗೌಡ ರಾಜೀನಾಮೆಯಿಂದ ತೆರುವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆದಿತ್ತು. ಚುನಾವಣೆ ಅಧಿಕಾರಿಯಾಗಿ ಬಿ.ಇ.ಓ ಸ್ವರೂಪ, ಸಹಾಯಕ ಚುನಾವಣಾಧಿಕಾರಿಯಾಗಿ ಪಿ.ಡಿ.ಓ ರಘು ಕರ್ತವ್ಯ ನಿರ್ವಹಿಸಿದರು. ಈ ವೇಳೇ ಗ್ರಾಮ ಪಂಚಾಯಿತಿ ಸದಸ್ಯರುಗಳು, ಕಾಂಗ್ರೆಸ್ ಪಕ್ಷದ ಮುಖಂಡರು ನೂತನ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದರು.

ICICI Home Finance

ಕಾರ್ಪೋರೇಟ್ ಕಚೇರಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ ಅಂಧೇರಿ (ಪೂರ್ವ), ಮುಂಬಯಿ-400059, ಭಾರತ.
ಶಾಖಾ ಕಚೇರಿ : 2ನೇ ಮಹಡಿ, ಆರ್ ಡಿ ಬಡ್ಡಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲ್ಭಾಗ, ಧಾರವಾಡ-ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ

[ಪ್ರೊವಿಸೊ ನಿಯಮ 8(6) ನ್ನು ನೋಡಿ]
ಸ್ಥಿರ ಆಸ್ತಿಗಳ ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002, ನಿಯಮ 8(8) ನ್ನು ಓದಿಕೊಂಡಂತೆ ನಿಯಮ 9(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ಅಡಿ ಇ-ಹರಾಜು ಮೂಲಕ ಸ್ಥಿರಾಸ್ತಿಗಳ ಮಾರಾಟಕ್ಕೆ ಮಾರಾಟ ಸೂಚನೆ.

ಈ ಮೂಲಕ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಸೂಚನೆ ನೀಡುವುದೇನೆಂದರೆ, ಈ ಕೆಳಗೆ ಹೆಸರಿಸಿರುವ ಆಸ್ತಿಯನ್ನು ಪೂರಕ ಭದ್ರತಾದಾರರಿಗೆ ಅಡಮಾನ/ಚಾರ್ಜ್ ಮಾಡಿದ್ದು, ಅದನ್ನು ಅಧಿಕೃತ ಅಧಿಕಾರಿ, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಅದನ್ನು ಅವರು "ಎಲ್ಲಿ ಏನಿದೆಯೋ ಹಾಗೆ", ಎಲ್ಲಿ ಹೇಗಿದೆಯೋ ಹಾಗೆ", "ಯಾವುದು ಹೇಗಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ವಿವರಿಸಿದಂತೆ ಮಾರಾಟ ಮಾಡಲಿರುವರು.

ಕ್ರ ಸಂ	ಸಾಲಗಾರರ/ಸಹ-ಸಾಲಗಾರರ ಜಾಮೀನುದಾರರ/ಕಾನೂನುರೀತ್ಯಾ ಉತ್ತರಾಧಿಕಾರಿ ಹೆಸರು/ ಸಾಲದ ಖಾತಾ ಸಂ.	ಭದ್ರತಾ ಆಸ್ತಿ ವಿವರ ಜೊತೆಗೆ ಯಾವುದಾದರೂ ಹರಭಾರೆ ಇದ್ದಲ್ಲಿ ಅದರ ವಿವರ	ಬಾಕಿ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಠೇವಣಿ ಹಣ	ಆಸ್ತಿ ಪರಿವೀಕ್ಷಣೆ ದಿನಾಂಕ & ಸಮಯ	ಹರಾಜಿನ ದಿನಾಂಕ & ಸಮಯ	ಹರಾಜು ದಿನಾಂಕದ ಒಂದು ದಿನ ಮೊದಲು	ಸರ್ಫೇಸಿ ಹಂತ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)	(ಹೆಚ್)	(ಐ)
1.	ಬಾಬು ನಾಯ್ಡು ಎಂ ಆರ್ (ಸಾಲಗಾರ) ಪದ್ಮ (ಸಹ-ಸಾಲಗಾರ) ಸಾಲದ ಖಾತಾ ಸಂ. LHBWQ00001523143 & LHBWQ00001527375	ಸೈಟ್ ನಂ. 24, ಪಿಐ ಖಾತಾ ನಂ. 238/24, ಸ್ಕೈಲನ್ ಗೋಲ್ಡನ್ ಗ್ರೀನ್ ಸಿಟಿ, ಹೊಸ ಸರ್ವೆ ನಂ. 20/8, ಹಳೆ ಸರ್ವೆ ನಂ. 20/2, ಜಗದೇನಹಳ್ಳಿ ಗ್ರಾಮ, ಲಕ್ಕೂರು ಹೋಬಳಿ, ಮಾಲೂರು ತಾಲೂಕು, ಕೋಲಾರ ಜಿಲ್ಲೆ	ರೂ. 16,81,886.68 ಆಗಸ್ಟ್ 22, 2024	ರೂ. 18,36,000/- ರೂ. 1,83,600/-	ಸೆಪ್ಟಂಬರ್ 23, 2024 11:00ಎಎಂ 03:00ಪಿಎಂ	ಅಕ್ಟೋಬರ್ 01, 2024 02:00ಪಿಎಂ 03:00ಪಿಎಂ	ಸೆಪ್ಟಂಬರ್ 30, 2024 ಸಂಜೆ04:00 ಗಂಟೆ ಮೊದಲು	ಭೌತಿಕ ಸ್ವಾಧೀನ
2.	ಚಂದನ್ ಹೆಚ್ ವಿ (ಸಾಲಗಾರ) ಅನಿತ ಎನ್ (ಸಹ-ಸಾಲಗಾರ) ಸಾಲದ ಖಾತಾ ಸಂ. LHBWQ00001328578	ಫ್ಲ್ಯಾಟ್ ನಂ. 102, 1ನೇ ಮಹಡಿ, ಪೃಥ್ವಿ ಗ್ರೀನ್ಸ್, ಸೈಟ್ ನಂ.194,195 & 193, ಸರ್ವೆ ನಂ. 116/2 ಮತ್ತು 116/3 ರಲ್ಲಿ ರಚಿತವಾಗಿದ್ದು, ದೊಡ್ಡತೋಗೂರು ಗ್ರಾಮ, ಬೇಗೂರ್ ಹೋಬಳಿ, ಬೆಂಗಳೂರು.	ರೂ. 55,09,260.02 ಆಗಸ್ಟ್ 22, 2024	ರೂ. 35,46,000/- ರೂ. 3,54,600/-	ಸೆಪ್ಟಂಬರ್ 23, 2024 11:00ಎಎಂ 03:00ಪಿಎಂ	ಅಕ್ಟೋಬರ್ 01, 2024 02:00ಪಿಎಂ 03:00ಪಿಎಂ	ಸೆಪ್ಟಂಬರ್ 30, 2024 ಸಂಜೆ04:00 ಗಂಟೆ ಮೊದಲು	ಭೌತಿಕ ಸ್ವಾಧೀನ

ಆನ್‌ಲೈನ್ ಹರಾಜನ್ನು ವೆಬ್‌ಸೈಟ್ (ಯುಆರ್‌ಎಲ್ ಲಿಂಕ್ eauctions.samil.in) ರಲ್ಲಿ ನಮ್ಮ ಹರಾಜು ಏಜೆನ್ಸಿ ಶ್ರೀರಾಮ್ ಆಟೋಮಾಲ್ ಇಂಡಿಯ ಲಿ. ಮೂಲಕ ನಡೆಸಲಾಗುವುದು. ಅಡಮಾನದಾರರಿಗೆ ಕೊನೆಯ ಅವಕಾಶವಾಗಿ ನೋಟೀಸ್ ನೀಡಲಾಗಿದ್ದು, ಒಟ್ಟು ಬಾಕಿಯನ್ನು ಸೆಪ್ಟಂಬರ್ 30, 2024 ರಂದು ಸಂಜೆ 5.00 ಗಂಟೆಯ ಒಳಗಾಗಿ ಪಾವತಿಸತಕ್ಕದ್ದು ಇಲ್ಲವಾದಲ್ಲಿ ಈ ಮೇಲೆ ವಿವರಿಸಿದ ಸ್ವತ್ತುಗಳನ್ನು ಮಾರಾಟ ಮಾಡಲಾಗುವುದು. ಉದ್ದೇಶಿತ ಬಿಡ್ಡುದಾರ(ರು) ಅರ್ನೆಸ್ಟ್ ಠೇವಣಿ ಹಣವನ್ನು (ಇಎಂಡಿ) ಕಡ್ಡಾಯವಾಗಿ ಆರ್‌ಟಿಜಿಎಸ್/ಡಿಮ್ಯಾಂಡ್ ಡ್ರಾಫ್ಟ್ (ಡಿಡಿ)/(ಅಂಕಣ ಇ ಯನ್ನು ಆಧಾರ ಮಾಡಿಕೊಳ್ಳಿ) ನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಇಲ್ಲಿಗೆ ಈ ಮೇಲೆ ತಿಳಿಸದ ವಿಳಾಸಕ್ಕೆ ಸೆಪ್ಟಂಬರ್ 30,2024 ರಂದು ಸಂಜೆ 04.00ಗಂಟೆಯ ಒಳಗಾಗಿ ಕಳುಹಿಸತಕ್ಕದ್ದು. ಉದ್ದೇಶಿತ ಬಿಡ್ಡುದಾರ(ರು) ನೋಂದಣಿ ನಮೂನೆಯ ಸಹಿ ಮಾಡಿದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು ಮತ್ತು ಬಿಡ್‌ನ ನಿಯಮ ಮತ್ತು ನಿಬಂಧನೆಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಈ ಮೇಲೆ ಹೆಸರಿಸಿದ ಶಾಖೆಗೆ ಸೆಪ್ಟಂಬರ್ 30, 2024 ರಂದು ಸಂಜೆ 5.00ಗಂಟೆಯ ಒಳಗಾಗಿ ಕಳುಹಿಸತಕ್ಕದ್ದು. ಅರ್ನೆಸ್ಟ್ ಠೇವಣಿ ಹಣ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಯನ್ನು ರಾಷ್ಟ್ರೀಕೃತ / ಷೆಡ್ಯೂಲ್ಡ್ ಬ್ಯಾಂಕ್ ನಿಂದ "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ.-ಹರಾಜು" ಪರವಾಗಿ ಕೋಲಾರ, ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಪಡೆಯಬೇಕು.

ಆಸ್ತಿ ಪರಿವೀಕ್ಷಣೆ ಸಂಬಂಧ ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ, ಮಾರಾಟದ ನಿಯಮ ಮತ್ತು ನಿಬಂಧನೆಗಳು ಅಥವಾ ಬಿಡ್ ಸಲ್ಲಿಕೆ ಇತ್ಯಾದಿಗಳಿಗೆ ದಯವಿಟ್ಟು ಸಂಪರ್ಕಿಸಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಮೊ.ಸಂ. 9920807300. ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಬಿಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ಭೇಟಿ ನೀಡಿ : https://www.icicihfc.com

ದಿನಾಂಕ : ಆಗಸ್ಟ್ 29, 2024, ಸ್ಥಳ: ಕೋಲಾರ, ಬೆಂಗಳೂರು

ಅಧಿಕೃತ ಅಧಿಕಾರಿ, "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್"
ಸಿಐಎನ್ ಸಂಖ್ಯೆ : ಯು65922ಎಂಹೆಚ್1999ಪಿಎಲ್‌ಸಿ120106.

ಪ್ರತಿದಿನ
ಉದಯಕಾಲ
ಓದಿರಿ

ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ರಾಮನಗರ
ಉಪ ವಿಭಾಗ, ರಾಮನಗರ.
ಆರ್.ಎ (ಎಲ್.ಕೆ.ಪಿ) ಸಂಖ್ಯೆ: 320/2023–24

ಮೇಲ್ಮನವಿದಾರರು: ಶ್ರೀ ಸಣ್ಣಪ್ಪ ಬಿನ್ ಲೇಟ್ ಚಿಕ್ಕೇಗೌಡ ವಯಸ್ಸು 50 ವರ್ಷ, ವಾಸ: ದೊಡ್ಡನಹಳ್ಳಿ ಗ್ರಾಮ, ಕಸಬಾ ಹೋಬಳಿ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಎದುರುದಾರರು: ತಮ್ಮಯ್ಯ ಬಿನ್ ಲೇಟ್ ತಿಮ್ಮ ವಯಸ್ಸು 50 ವರ್ಷವಾಸ: ಮಲ್ಲಂಗೆರೆ ಗ್ರಾಮ, ಕಸಬಾ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಈ ಅಪೀಲುನ್ನು ಅಪೀಲುದಾರರು ಎದುರುದಾರರುಗಳ ವಿರುದ್ಧ ರಾಮನಗರ ಜಿಲ್ಲೆ, ಚೆನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಮಲ್ಲಂಗೆರೆ ಗ್ರಾಮದ ಸರ್ವೆ ನಂಬರ್. 21/2 ರಲ್ಲಿ 0–12 ಗುಂಟೆ ಖಾತಾ ನಂಬರ್ – 391 ರ ಜಮೀನಿಗೆ ಸಂಬಂಧಿಸಿದಂತೆ ಆಗಿರುವ ಅಕ್ರಮ ಖಾತಾ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿದಾರರು ಪ್ರಕರಣವನ್ನು ದಾಖಲಿಸಿದ್ದು, 1ನೇ ಎದುರುದಾರರಿಗೆ ಮಾನ್ಯ ಘನ ನ್ಯಾಯಾಲಯದಿಂದ ನೋಟೀಸ್‌ನ್ನು ನೊಂದಾಯಿತಿ ಅಂಚೆ ಮುಖಾಂತರ ಹೊರಡಿಸಿದ್ದು, 1ನೇ ಎದುರುದಾರರು ನೋಟೀಸ್ ಅನ್ನು ಪಡೆದಿದ್ದು, 1ನೇ ಎದುರುದಾರರು ಮೇಲ್ಮನವಿಯ ಶೀರ್ಷಿಕೆ ವಿಳಾಸದಲ್ಲಿ ವಾಸವಾಗಿದ್ದರೂ ಸಹ, ಬೇಕೆಂತಲೇ ನೋಟಿಸನ್ನು ಪಡೆದುಕೊಳ್ಳದೇ ತಿರಸ್ಕರಿಸಿರುತ್ತಾರೆ. ಆದ್ದರಿಂದ 1ನೇ ಎದುರುದಾರರಿಗೆ ಕನ್ನಡ ದಿನ ಪತ್ರಿಕೆ ಉದಯ ಕಾಲ ದಿನ ಪತ್ರಿಕೆ ಮೂಲಕ ನೋಟೀಸ್ ಪ್ರಕಟಿಸಲು ಅನುಮತಿ ನೀಡಬೇಕೆಂದು ಕೋರಿ, ಸದರಿ ಅಪೀಲಿನಲ್ಲಿ 1ನೇ ಎದುರುದಾರನ್ನು ಪಕ್ಷಗಾರರಾಗಿ ಮಾಡಿದ್ದು, ತಾವುಗಳು ಈ ನ್ಯಾಯಾಲಯದಿಂದ ನೋಂದಣಿ ಅಂಚೆ ಮೂಲಕ, ಸಮನ್ಸ್ ನೀಡಿದ್ದರೂ ಕೂಡ ಜಾರಿಯಾಗದೇ ಘನ ನ್ಯಾಯಾಲಯಕ್ಕೆ ವಾಪಸ್ಸು ಬಂದಿರುತ್ತದೆ. ಆದುದರಿಂದ ಸದರಿ ಎದುರುದಾರರಾದ 1ನೇ ರವರುಗಳಾದ ನಿಮಗೆ ತಿಳಿಯಪಡಿಸುವುದೇನೆಂದರೆ : ಈ ಅಪೀಲಿನ ವಿಚಾರಣಾ ದಿನಾಂಕವನ್ನು 23.09.2024 ರಂದು ಮಧ್ಯಾಹ್ನ 2.30 ಗಂಟೆಗೆ ನಿಗಧಿಪಡಿಸಿದ್ದು, ಸದರಿ ದಿನಾಂಕದಂದು ಮೇಲ್ಕಂಡ 1ನೇ ಎದುರುದಾರರಾದ ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನಿಮ್ಮ ತಕರಾರನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸುವುದು. ಒಂದು ವೇಳೆ ಸದರಿ ದಿನಾಂಕದಂದು ನೀವು ಘನ ನ್ಯಾಯಾಲಯಕ್ಕೆ ಗೈರುಹಾಜರಾದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು 1ನೇ ಎದುರುದಾರರಾದ ನಿಮ್ಮ ವಿರುದ್ಧ ಏಕಪಕ್ಷೀಯ ಆದೇಶವನ್ನು ಮಾನ್ಯ ನ್ಯಾಯಾಲಯವು ಹೊರಡಿಸಿದ್ದಲ್ಲಿ ಅದಕ್ಕೆ ನೀವುಗಳು ಹೊಣೆಗಾರರು ಎಂಬುದನ್ನು ತಿಳಿಯುವುದು.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ರಾಮನಗರ
ಅರ್ಜಿದಾರರ ಪರ ವಕೀಲರು
ಕೆವೈ ಸತೀಶ್
ವಕೀಲರು
ರಾಮನಗರ

ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ರಾಮನಗರ
ಉಪ ವಿಭಾಗ, ರಾಮನಗರ
ಆರ್.ಎ (ಎಲ್.ಕೆ.ಪಿ) ಸಂಖ್ಯೆ: 703/2023–24

ಮೇಲ್ಮನವಿದಾರರು: ಶ್ರೀ ಶಿವಲಿಂಗೇಗೌಡ ಬಿನ್ ಲೇಟ್ ಮಗಣ್ಣ @ ಮಾಳಿಗೇಗೌಡ ವಯಸ್ಸು 60 ವರ್ಷ, ವಾಸ: ಅಂಗರಹಳ್ಳಿ ಗ್ರಾಮ, ಅರಟಬಲೆ ದಾಖ್ಲೆ ಚೀಲೂರು ಅಂಚೆ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಎದುರುದಾರರು: 1. ಲಿಂಗೇಗೌಡ ಬಿನ್ ಲೇಟ್ ಮರಿಗೌಡ ವಯಸ್ಸು 75 ವರ್ಷ ಪಿಚ್ಚನಕೆರೆ ಗ್ರಾಮ, ಕೊಟ್ಟಗಾಳು ಅಂಚೆ, ಹಾರೋಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಈ ಅಪೀಲುನ್ನು ಅಪೀಲುದಾರರು ಎದುರುದಾರರುಗಳ ವಿರುದ್ಧ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ಅರಟಬಲೆ ಗ್ರಾಮದ ಸರ್ವೆ ನಂಬರ್. 80/7 ರಲ್ಲಿ 2 ಎಕರೆ ಜಮೀನಿನ ಪೈಕಿ 0–37 ಗುಂಟೆ ಖರಾಬ್ ಕಳೆದು 1 ಎಕರೆ 03 ಗುಂಟೆ ಜಮೀನಿನ ಆರ್.ಆರ್.ಸಂಖ್ಯೆ 692 ರ ಜಮೀನಿಗೆ ಸಂಬಂಧಿಸಿದಂತೆ ಆಗಿರುವ ಅಕ್ರಮ ಖಾತಾ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿದಾರರು ಪ್ರಕರಣವನ್ನು ದಾಖಲಿಸಿದ್ದು, 1ನೇ ಎದುರುದಾರರಿಗೆ ಮಾನ್ಯ ಘನ ನ್ಯಾಯಾಲಯದಿಂದ ನೋಟೀಸ್‌ನ್ನು ನೊಂದಾಯಿತಿ ಅಂಚೆ ಮುಖಾಂತರ ಹೊರಡಿಸಿದ್ದು, 1ನೇ ಎದುರುದಾರರು ನೋಟೀಸ್ ಅನ್ನು ಪಡೆದಿದ್ದು, 1ನೇ ಎದುರುದಾರರು ಮೇಲ್ಮನವಿಯ ಶೀರ್ಷಿಕೆ ವಿಳಾಸದಲ್ಲಿ ವಾಸವಾಗಿದ್ದರೂ ಸಹ, ಬೇಕೆಂತಲೇ ನೋಟಿಸನ್ನು ಪಡೆದುಕೊಳ್ಳದೇ ತಿರಸ್ಕರಿಸಿರುತ್ತಾರೆ. ಆದ್ದರಿಂದ 1ನೇ ಎದುರುದಾರರಿಗೆ ಕನ್ನಡ ದಿನ ಪತ್ರಿಕೆ ಉದಯ ಕಾಲ ದಿನ ಪತ್ರಿಕೆ ಮೂಲಕ ನೋಟೀಸ್ ಪ್ರಕಟಿಸಲು ಅನುಮತಿ ನೀಡಬೇಕೆಂದು ಕೋರಿ, ಸದರಿ ಅಪೀಲಿನಲ್ಲಿ 1ನೇ ಎದುರುದಾರನ್ನು ಪಕ್ಷಗಾರರಾಗಿ ಮಾಡಿದ್ದು, ತಾವುಗಳು ಈ ನ್ಯಾಯಾಲಯದಿಂದ ನೋಂದಣಿ ಅಂಚೆ ಮೂಲಕ, ಸಮನ್ಸ್ ನೀಡಿದ್ದರೂ ಕೂಡ ಜಾರಿಯಾಗದೇ ಘನ ನ್ಯಾಯಾಲಯಕ್ಕೆ ವಾಪಸ್ಸು ಬಂದಿರುತ್ತದೆ. ಆದುದರಿಂದ ಸದರಿ ಎದುರುದಾರರಾದ 1ನೇ ರವರುಗಳಾದ ನಿಮಗೆ ತಿಳಿಯಪಡಿಸುವುದೇನೆಂದರೆ : ಈ ಅಪೀಲಿನ ವಿಚಾರಣಾ ದಿನಾಂಕವನ್ನು 27.09.2024 ರಂದು ಮಧ್ಯಾಹ್ನ 2.30 ಗಂಟೆಗೆ ನಿಗಧಿಪಡಿಸಿದ್ದು, ಸದರಿ ದಿನಾಂಕದಂದು ಮೇಲ್ಕಂಡ 1ನೇ ಎದುರುದಾರರಾದ ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನಿಮ್ಮ ತಕರಾರನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸುವುದು. ಒಂದು ವೇಳೆ ಸದರಿ ದಿನಾಂಕದಂದು ನೀವು ಘನ ನ್ಯಾಯಾಲಯಕ್ಕೆ ಗೈರುಹಾಜರಾದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು 1ನೇ ಎದುರುದಾರರಾದ ನಿಮ್ಮ ವಿರುದ್ಧ ಏಕಪಕ್ಷೀಯ ಆದೇಶವನ್ನು ಮಾನ್ಯ ನ್ಯಾಯಾಲಯವು ಹೊರಡಿಸಿದ್ದಲ್ಲಿ ಅದಕ್ಕೆ ನೀವುಗಳು ಹೊಣೆಗಾರರು ಎಂಬುದನ್ನು ತಿಳಿಯುವುದು.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ರಾಮನಗರ
ಅರ್ಜಿದಾರರ ಪರ ವಕೀಲರು
ಕೆವೈ ಸತೀಶ್
ವಕೀಲರು
ರಾಮನಗರ

ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ರಾಮನಗರ
ಉಪ ವಿಭಾಗ, ರಾಮನಗರ.
ಆರ್.ಎ (ಎಲ್.ಕೆ.ಪಿ) ಸಂಖ್ಯೆ: 2095/2023–24

ಮೇಲ್ಮನವಿದಾರರು: 1. ಶ್ರೀ ಎಸ್.ಭೈರಪ್ಪ ಬಿನ್ ಲೇಟ್ ಬಿ. ಸಿದ್ದಲಿಂಗಯ್ಯ ವಯಸ್ಸು 75 ವರ್ಷ, 2. ಶಿವಣ್ಣ, ಎಸ್ ಬಿನ್ ಲೇಟ್ ಬಿ. ಸಿದ್ದಲಿಂಗಯ್ಯ ವಯಸ್ಸು 72 ವರ್ಷ, ಇಬ್ಬರ ವಾಸ: ಸುಗ್ಗನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ

ಎದುರುದಾರರು: 1. ಶ್ರೀ ಭೈರಪ್ಪ ಬಿನ್ ಲೇಟ್ ಸಿದ್ದಯ್ಯ ವಯಸ್ಸು 55 ವರ್ಷ. 2. ಶಿವಲಿಂಗಯ್ಯ ಬಿನ್ ಲೇಟ್ ಸಿದ್ದಯ್ಯ ವಯಸ್ಸು 45 ವರ್ಷ. 3. ರೇವಣ್ಣ ಬಿನ್ ಲೇಟ್ ಸಿದ್ದಯ್ಯ ವಯಸ್ಸು 42 ವರ್ಷ. 4. ಶಿವಣ್ಣ ಬಿನ್ ಲೇಟ್ ಸಿದ್ದಯ್ಯ ವಯಸ್ಸು 43 ವರ್ಷ.1 ರಿಂದ 4 ರವರ ವಾಸ: ಸುಗ್ಗನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಈ ಅಪೀಲುನ್ನು ಅಪೀಲುದಾರರು ಎದುರುದಾರರುಗಳ ವಿರುದ್ಧ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಲಕ್ಕಸಂದ್ರ ಗ್ರಾಮದ ಸರ್ವೆ ನಂಬರ್. 24/2ಎ ರಲ್ಲಿ 1 ಎಕರೆ 01 ಗುಂಟೆ ಜಮೀನಿಗೆ ಎಂ.ಆರ್.ಎಂ. 5/1998–1999 ಅನ್ನು ಪ್ರಶ್ನಿಸಿ ಮೇಲ್ಮನವಿದಾರರು ಪ್ರಕರಣವನ್ನು ದಾಖಲಿಸಿದ್ದು, 1 ರಿಂದ 4ನೇ ಎದುರುದಾರರಿಗೆ ಮಾನ್ಯ ಘನ ನ್ಯಾಯಾಲಯದಿಂದ ನೋಟೀಸ್‌ನ್ನು ನೊಂದಾಯಿತಿ ಅಂಚೆ ಮುಖಾಂತರ ಹೊರಡಿಸಿದ್ದು, 1 ರಿಂದ 4ನೇ ಎದುರುದಾರರು ನೋಟೀಸ್ ಅನ್ನು ಪಡೆದಿದ್ದು, 1 ರಿಂದ 4ನೇ ಎದುರುದಾರರು ಮೇಲ್ಮನವಿಯ ಶೀರ್ಷಿಕೆ ವಿಳಾಸದಲ್ಲಿ ವಾಸವಾಗಿದ್ದರೂ ಸಹ, ಬೇಕೆಂತಲೇ ನೋಟಿಸನ್ನು ಪಡೆದುಕೊಳ್ಳದೇ ತಿರಸ್ಕರಿಸಿರುತ್ತಾರೆ. ಆದ್ದರಿಂದ 1 ರಿಂದ 4ನೇ ಎದುರುದಾರರಿಗೆ ಕನ್ನಡ ದಿನ ಪತ್ರಿಕೆ ಉದಯ ಕಾಲ ದಿನ ಪತ್ರಿಕೆ ಮೂಲಕ ನೋಟೀಸ್ ಪ್ರಕಟಿಸಲು ಅನುಮತಿ ನೀಡಬೇಕೆಂದು ಕೋರಿ, ಸದರಿ ಅಪೀಲಿನಲ್ಲಿ 1 ರಿಂದ 4ನೇ ಎದುರುದಾರನ್ನು ಪಕ್ಷಗಾರರಾಗಿ ಮಾಡಿದ್ದು, ತಾವುಗಳು ಈ ನ್ಯಾಯಾಲಯದಿಂದ ನೋಂದಣಿ ಅಂಚೆ ಮೂಲಕ, ಸಮನ್ಸ್ ನೀಡಿದ್ದರೂ ಕೂಡ ಜಾರಿಯಾಗದೇ ಘನ ನ್ಯಾಯಾಲಯಕ್ಕೆ ವಾಪಸ್ಸು ಬಂದಿರುತ್ತದೆ. ಆದುದರಿಂದ ಸದರಿ ಎದುರುದಾರರಾದ 1 ರಿಂದ 3ನೇ ರವರುಗಳಾದ ನಿಮಗೆ ತಿಳಿಯಪಡಿಸುವುದೇನೆಂದರೆ : ಈ ಅಪೀಲಿನ ವಿಚಾರಣಾ ದಿನಾಂಕವನ್ನು 02–09–2024 ರಂದು ಮಧ್ಯಾಹ್ನ 2.30 ಗಂಟೆಗೆ ನಿಗಧಿಪಡಿಸಿದ್ದು, ಸದರಿ ದಿನಾಂಕದಂದು ಮೇಲ್ಕಂಡ 1 ರಿಂದ 4ನೇ ಎದುರುದಾರರಾದ ನೀವು ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನಿಮ್ಮ ತಕರಾರನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸುವುದು. ಒಂದು ವೇಳೆ ಸದರಿ ದಿನಾಂಕದಂದು ನೀವು ಘನ ನ್ಯಾಯಾಲಯಕ್ಕೆ ಗೈರುಹಾಜರಾದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು 1 ರಿಂದ 4ನೇ ಎದುರುದಾರರಾದ ನಿಮ್ಮ ವಿರುದ್ಧ ಏಕಪಕ್ಷೀಯ ಆದೇಶವನ್ನು ಮಾನ್ಯ ನ್ಯಾಯಾಲಯವು ಹೊರಡಿಸಿದ್ದಲ್ಲಿ ಅದಕ್ಕೆ ನೀವುಗಳು ಹೊಣೆಗಾರರು ಎಂಬುದನ್ನು ತಿಳಿಯುವುದು.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ರಾಮನಗರ
ಅರ್ಜಿದಾರರ ಪರ ವಕೀಲರು
ಕೆವೈ ಸತೀಶ್
ವಕೀಲರು

ಬ್ಯಾಂಕ್ ಆಫ್ ಬರೋಡ
ಬೈರಮಂಗಲ ಶಾಖೆ

ಪ್ರಾದೇಶಿಕ ಕಛೇರಿ, ಮಂಡ್ಯ, 1ನೇ ಮಹಡಿ, ಮಾಕಂ ಟವರ್ಸ್ 2ನೇ ಮೈನ್, ವಿವೇಕಾನಂದ ರಸ್ತೆ, ಅಶೋಕನಗರ, ಮಂಡ್ಯ–571401, ದೂರವಾಣಿ ಸಂ. 91(8232)-220577. www.bankofbaroda.in

ಸಾಲಗಾರರು/ಜಾಮೀನುದಾರರರಿಗೆ ನೋಟೀಸು

2002ರ ಸಬ್–ಸೆಕ್ಷನ್ (2) ಸೆಕ್ಷನ್ 13 ರನ್ನು ಸರ್ಫೇಸಿ ಆಕ್ಟ್ ಓದಿಕೊಂಡಂತೆ ನೋಟೀಸು

ನಿಮ್ಮ ಕೋರಿಕೆಯಂತೆ, ಬ್ಯಾಂಕು ತನ್ನ **ಬ್ಯಾಂಕ್ ಆಫ್ ಬರೋಡ** ದಿಂದ ಈ ಕೆಳಕಂಡ ವ್ಯಕ್ತಿಗಳಿಗೆ ಆಧಾರಿತ ಸ್ವತ್ತುಗಳಿಗೆ ಪ್ರತಿಯಾಗಿ ಸಾಲ ಸೌಲಭ್ಯಗಳನ್ನು ಒದಗಿಸಿರುತ್ತದೆ. ನೀವು ಭದ್ರತಾ ಒಪ್ಪಂದಗಳು/ ದಸ್ತಾವೇಜುಗಳ ಮೂಲಕ ಮತ್ತು ಹಕ್ಕು ಪತ್ರಗಳ ಠೇವಣಿಯ ಮೂಲಕ ಅಡಮಾನ ಒದಗಿಸಿ ಯಾವ ಆಸ್ತಿಯ ಮೇಲೆ ಭದ್ರತೆ ನೀಡಿದ್ದೀರೋ ಅದರ ವಿವರಗಳನ್ನು ಸಹ ಈ ಕೆಳಗೆ ತಿಳಿಸಲಾಗಿದೆ. ಹಣಕಾಸಿನ ನೆರವು ಸೌಲಭ್ಯಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (ಸಾಲದ ಮರುಪಾವತಿ) ಸಮರ್ಪಕವಾಗಿಲ್ಲದ್ದರಿಂದ ಆರ್‌ಬಿಐ ನಿರ್ದೇಶನದಸೂತ್ರ/ಮಾರ್ಗದರ್ಶಿ ಸೂತ್ರಗಳ ಪ್ರಕಾರ ಈ ಸಾಲಗಳನ್ನು ನಿರ್ವಹಣಾ ರಹಿತ ಸ್ವತ್ತುಗಳು ಎಂದು ವರ್ಗೀಕರಿಸಲಾಗಿದೆ. ಸಾಲದ ಅಸಲಿನ ಮೊತ್ತ ಹಾಗೂ ಅದರ ಮೇಲಿನ ಬಡ್ಡಿಯನ್ನು ಮರುಪಾವತಿ ಮಾಡಲು ಸಾಲಗಾರರು ವಿಫಲರಾಗಿರುವುದರಿಂದ ಮತ್ತು ಹೊಣೆಗಾರಿಕೆಯನ್ನು ನಿರ್ವಹಿಸುವಂತೆ ಸಾಲವನ್ನು ಮರುಪಾವತಿ ಮಾಡುವಂತೆ ನಿಮಗೆ ರಿಜಿಸ್ಟರ್ಡ್ ಎಡಿ ಮೂಲಕ ಕಳುಹಿಸಲಾಗಿದ್ದ ಡಿಮ್ಯಾಂಡ್ ನೋಟೀಸನ್ನು ಸ್ವೀಕರಿಸದೇ ಇರುವುದರಿಂದ/ವಾಪಸ್ಸು ಕಳುಹಿಸಿರುವುದಿಂದ ಈ ನೋಟೀಸನ್ನು ಪ್ರಕಟಿಸಲಾಗಿದೆ.

1. ಸಾಲಗಾರರ/ಸಹ ಸಾಲಗಾರರ/ಅಡಮಾನದಾರರ/ಜಾಮೀನುದಾರರ ಹೆಸರು ಮತ್ತು ವಿಳಾಸ : (1) **ಶ್ರೀ. ಸಿ ಆರ್ ಶಶಿಕುಮಾರ್** ಬಿನ್ ರಾಮಕೃಷ್ಣ ರೆಡ್ಡಿ, #37, ಬೈರಮಂಗಲ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ–562109. (2) **ಶ್ರೀಮತಿ ಗೀತಾ ಎ ವಿ** ಕೋಂ ಸಿ ಆರ್ ಶಶಿಕುಮಾರ್, #37, ಬೈರಮಂಗಲ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ–562109. (3) **ನಿಖಿಲ್ ಎಸ್** ಬಿನ್ ಸಿ ಆರ್ ಶಶಿಕುಮಾರ್, #37, ಬೈರಮಂಗಲ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ–562109. **ಜಾಮೀನುದಾರರು: ಶ್ರೀ ಪುರುಷೋತ್ತಮ** ಬಿನ್ ದಾಸಪ್ಪ, ಕೆಂಪಶೆಟ್ಟಿ ದೊಡ್ಡಿ ಗ್ರಾಮ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ–562109.

ಸ್ವರೂಪ ಮತ್ತು ಸೌಲಭ್ಯದ ಪ್ರಕಾರ	ಮಿತಿ	ದಿನಾಂಕ: 18.08.2024 ರಿಂದ ಬಡ್ಡಿ ದರ	ದಿನಾಂಕ: 18.08.2024 ರಿಂದ ಉಳಿಕೆ ಮೊತ್ತ
Home Loan A/c No: 67320600000431	Rs. 15,00,000/-	8.10%	ರೂ.9,02,771.64/– (ದಿನಾಂಕ: 18.08.2024 ರಂತೆ ಬಾಕಿಯಿದೆ) + 19.08.2024 ರಿಂದ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು.

ಭದ್ರತಾ ಆಸ್ತಿಯ ವಿವರ: ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಖಾತಾ ನಂ.152900400700827, 67/72/ಪಿ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 51 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 47 1/2 ಅಡಿಗಳು. ಈ ಆಸ್ತಿಯು ಬೈರಮಂಗಲ ಗ್ರಾಮ ಮತ್ತು ಪೋಸ್ಟ್, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ–562109ಯಲ್ಲಿದೆ. ಚೆಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಾಮಕೃಷ್ಣ ರೆಡ್ಡಿರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ರಾಮಕೃಷ್ಣ ರೆಡ್ಡಿ ಪುತ್ರರರಿಗೆ ಸೇರಿದ ಆಸ್ತಿ, ದಕ್ಷಿಣಕ್ಕೆ: ಮುದ್ದೀರಚಾರ್‌ರವರಿಗೆ ಸೇರಿದ ಮನೆ.

ಬರಬೇಕಾದ ಬಾಕಿ ಮೊತ್ತ: ರೂ.9,02,771.64 (ರೂಪಾಯಿ ಒಂಬತ್ತು ಲಕ್ಷದ ಎರಡು ಸಾವಿರದ ಏಳುನೂರ ಎಪ್ಪತ್ತೊಂದು ಮತ್ತು ಅರವತ್ತನಾಲ್ಕು ಪೈಸೆ ಮಾತ್ರ) (ದಿನಾಂಕ: 18.08.2024 ರಂತೆ ಬಾಕಿಯಿದೆ) + 19.08.2024 ರಿಂದ ಬಡ್ಡಿ ಮತ್ತು ಇತರೆ ಖರ್ಚುವೆಚ್ಚಗಳು.

ಎನ್‌ಪಿಎ ದಿನಾಂಕ : 29.07.2024 **ಡಿಮ್ಯಾಂಡ್ ನೋಟಿಸ್ ದಿನಾಂಕ: 20.08.2024**

ಈ ನೋಟೀಸಿನ ದಿನಾಂಕದಿಂದ 60 ದಿನಗಳ ಒಳಗೆ ಮೇಲೆ ತಿಳಿಸಿದ ಸಾಲದ ಮೊತ್ತ ಮತ್ತು ಬಡ್ಡಿ ಮತ್ತು ಪ್ರಾಸಂಗಿಕ ಖರ್ಚು ವೆಚ್ಚಗಳನ್ನು ಪಾವತಿಸದಿದ್ದಲ್ಲಿ ಬ್ಯಾಂಕು ಸರ್ಫೇಸಿ ಆಕ್ಟ್‌ನ ಸೆಕ್ಷನ್ 13ರ ಸಬ್‌ಸೆಕ್ಷನ್ (4)ರ ಪ್ರಕಾರ ಎಲ್ಲಾ ಅಥವಾ ಯಾವುದೇ ಹಕ್ಕನ್ನು ಚಲಾಯಿಸಬೇಕಾಗುತ್ತದೆ ಸೆಕ್ಷನ್ 13ರ ಸಬ್‌ಸೆಕ್ಷನ್ 13ರ ಪ್ರಕಾರ, ಷೆಡ್ಯೂಲ್ ನಲ್ಲಿ ಸೂಚಿಸಿರುವ ಭದ್ರತೆಯಾಗಿ ಒದಗಿಸಿರುವ ಆಸ್ತಿಗಳನ್ನು ಬ್ಯಾಂಕಿನ ಲಿಖಿತ ಒಪ್ಪಿಗೆ ಪಡೆಯದೆ ಮಾರಾಟದ ಮೂಲಕ ವರ್ಗಾಯಿಸುವುದಕ್ಕಾಗಲೀ, ಭೋಗ್ಯಕ್ಕೆ ನೀಡುವುದಕ್ಕಾಗಲೀ, ನಿಮಗೆ ಅಧಿಕಾರವಿರುವುದಿಲ್ಲ. ಈ ನೋಟೀಸನ್ನು ಮುಂದೆ ಬ್ಯಾಂಕ್ ಯಾವುದೇ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಥವಾ ಅನ್ವಯವಾಗುವ ಬೇರೆ ಯಾವುದೇ ಕಾನೂನುಬದ್ಧ ಕರಾರುಗಳನ್ನು ಅಗತ್ಯವಾದಲ್ಲಿ ಚಲಾಯಿಸುವುದಕ್ಕೆ ಇರುವ ಹಕ್ಕುಗಳ ಬಗ್ಗೆ ಪೂರ್ವಾಗ್ರಹವಿಲ್ಲದೆ ಹೊರಡಿಸಲಾಗಿದೆ.

ದಿನಾಂಕ: 28.08.2024
ಸ್ಥಳ: ಮಂಡ್ಯ
ಸಹಿ/– ಮುಖ್ಯ ವ್ಯವಸ್ಥಾಪಕರು,
ಬ್ಯಾಂಕ್ ಆಫ್ ಬರೋಡ

ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ
ಸಿ.ಮಿಸ್.ನಂ. 869 /2024

ಅರ್ಜಿದಾರರು:
1) ಶ್ರೀಮತಿ ದೇವರಾಜಮ್ಮ ಬಿನ್ ಲೇ. ಜವರೇಗೌಡ, ವಯಸ್ಸು 56 ವರ್ಷ.
2) ಶಿವಲಿಂಗಮ್ಮ ಕೋಂ ಲೇ. ಚಿಕ್ಕಣ್ಣ, ವಯಸ್ಸು 62 ವರ್ಷ.
3) ಶ್ರೀ ಸಂದೀಶ್ ಬಿನ್ ಲೇ. ಚಿಕ್ಕಣ್ಣ, ವಯಸ್ಸು 42 ವರ್ಷ.
ಎಲ್ಲರ ವಾಸ : ಎಂ.ಬಿ.ಹಳ್ಳಿ ಗ್ರಾಮ, ಮಳೂರು ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ:

ಎದುರುದಾರರು : ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಂಡ ಅರ್ಜಿದಾರರು 1 ಮತ್ತು ಅರ್ಜಿದಾರರ 2ರವರ ಗಂಡನಾದ ಹಾಗೂ 3ನೇ ಅರ್ಜಿದಾರರ ತಂದೆಯಾದ ಲೇ. ಚಿಕ್ಕಣ್ಣರವರು ಮೃತ ನಿಂಗಮ್ಮ ಬಿನ್ ಲೇ. ಜವರೇಗೌಡರವರ ಖಾಸಾ ಮಕ್ಕಳಾಗಿದ್ದು ಸದರಿ ಮೃತರು ದಿನಾಂಕ: 13.06.2004 ರಂದು ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಎಂ.ಬಿ.ಹಳ್ಳಿ ಗ್ರಾಮದಲ್ಲಿ ನಿಧನರಾಗಿರುತ್ತಾರೆ. ಈ ಸಂಬಂಧ ಅರ್ಜಿದಾರರು ಸದರಿ ಮೃತರ ಮರಣ ಪ್ರಮಾಣ ಪತ್ರ ಕೋರಿ ಈ ಮೊಕದ್ದಮೆ ಹೂಡಿರುತ್ತಾರೆ. ಸದರಿ ಅರ್ಜಿಯು ದಿನಾಂಕ 20–09–2024ರ ಬೆಳಗ್ಗೆ 11ಗಂಟೆಗೆ ಪ್ರಕರಣವು ವಿಚಾರಣೆಗೆ ಇದ್ದು, ಅಂದು ಯಾರಾದರೂ ತಕರಾರು ಸಲ್ಲಿಸುವವರು ಹಾಗೂ ಆಸಕ್ತಿ ಉಳ್ಳವರು ಇದ್ದರೆ, ಮಾನ್ಯ ಘನ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದೆಂದು ತಿಳಿಯುವುದು.

ದಿನಾಂಕ 21.08.2024 ರಂದು ನ್ಯಾಯಾಲಯದ ಆದೇಶ ಮತ್ತು ಅಪ್ಪಣೆ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಬರೆಯಲಾಗಿದೆ.

ಅರ್ಜಿದಾರರ ಪರ ವಕೀಲರು
ಸ್ಥಳ: ಚನ್ನಪಟ್ಟಣ
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
(ಕಿರಿಯ ಶ್ರೇಣಿ) ಚನ್ನಪಟ್ಟಣ.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ
ಸಿ.ಮಿಸ್.ನಂ. 861 /2024

ಅರ್ಜಿದಾರರು:
1) ಶ್ರೀಮತಿ ಸುಶೀಲ ಕೋಂ ಲೇ. ಕೃಷ್ಣ
2) ಶ್ರೀ ವಿಜಯಕುಮಾರ್ ಬಿನ್ ಲೇ. ಕೃಷ್ಣ
3) ಶ್ರೀ ಕುಮಾರ್ ಬಿ. ಬಿನ್ ಲೇ. ಕೃಷ್ಣ
ಎಲ್ಲರ ವಾಸ : #301, ನಿಸರ್ಗ, ಉದಯನಗರ, 5ನೇ ಕ್ರಾಸ್, ಬೆಂಗಳೂರು ದಕ್ಷಿಣ.
ಖಾಯಂ ವಾಸ: ವಾಲೇಮರದದೊಡ್ಡಿ ಗ್ರಾಮ, ವಿ.ಹುರ ಹೋಬಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ:

ಎದುರುದಾರರು : ತಹಶೀಲ್ದಾರ್‌ರವರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

1ನೇ ಅರ್ಜಿದಾರರು ಮೃತ ಕೃಷ್ಣ ಬಿನ್ ಲೇ. ಮುತ್ತಯ್ಯರವರ ಹೆಂಡತಿ ಯಾಗಿದ್ದು, 2 ಮತ್ತು 3ನೇ ಅರ್ಜಿದಾರರು ಇವರ ಖಾಸಾ ಮಕ್ಕಳಾಗಿರುತ್ತಾರೆ. ಸದರಿ ಮೃತರು ದಿನಾಂಕ: 09–06–2016 ಮರಣ ಹೊಂದಿರುತ್ತಾರೆ. ಸದರಿ ಮೃತರಾದ ಕೃಷ್ಣ ಬಿನ್ ಲೇ. ಮುತ್ತಯ್ಯರವರಿಗೆ ಅರ್ಜಿದಾರರನ್ನ ಬಿಟ್ಟು ಯಾರೂ ವಾರಸುದಾರರು ಇರುವುದಿಲ್ಲ. ಈ ಸಂಬಂಧ ಅರ್ಜಿದಾರರು ಮೃತರ ಮರಣ ಪ್ರಮಾಣ ಪತ್ರ ಕೋರಿ ಈ ಮೊಕದ್ದಮೆ ಹೂಡಿರುತ್ತಾರೆ. ಸದರಿ ಅರ್ಜಿಯು ದಿನಾಂಕ 15.10.2024 ರಂದು ಬೆಳಿಗ್ಗೆ 11ಕ್ಕೆ ಪ್ರಕರಣವು ವಿಚಾರಣೆಗೆ ಇದ್ದು, ಅಂದು ಯಾರಾದರೂ ತಕರಾರು ಸಲ್ಲಿಸುವವರು ಹಾಗೂ ಆಸಕ್ತಿ ಉಳ್ಳವರು ಇದ್ದರೆ, ಮಾನ್ಯ ಘನ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದೆಂದು ತಿಳಿಯುವುದು.

ದಿನಾಂಕ 21.08.2024 ರಂದು ನ್ಯಾಯಾಲಯದ ಆದೇಶ ಮತ್ತು ಅಪ್ಪಣೆ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಬರೆಯಲಾಗಿದೆ.

ಅರ್ಜಿದಾರರ ಪರ ವಕೀಲರು
ಸ್ಥಳ: ಚನ್ನಪಟ್ಟಣ
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
(ಕಿರಿಯ ಶ್ರೇಣಿ) ಚನ್ನಪಟ್ಟಣ.

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ
ಸಿ.ಮಿಸ್.ನಂ. 871 /2024

ಅರ್ಜಿದಾರರು:
1) ಶ್ರೀ ಚಂದ್ರಯ್ಯ ಬಿನ್ ಕರಿಯಪ್ಪ
2) ಶ್ರೀಮತಿ ಕೆ.ಜಿ. ರುದ್ರಾಣಮ್ಮ ಕೋಂ ಚಂದ್ರಯ್ಯ
3) ಶ್ರೀಮತಿ ಹೇಮಾ ಸಿ ಬಿನ್ ಚಂದ್ರಯ್ಯ
4) ಶ್ರೀ ಮಧುಕುಮಾರ್ ಸಿ ಬಿನ್ ಚಂದ್ರಯ್ಯ
5) ಶ್ರೀಮತಿ ರಶ್ಮಿ ಸಿ. ಬಿನ್ ಚಂದ್ರಯ್ಯ
ಅರ್ಜಿದಾರರ ವಿಳಾಸ : ಹನುಮಂತ ನಗರ, ಚನ್ನಪಟ್ಟಣ ಟೌನ್ ಹಾಗೂ ತಾಲ್ಲೂಕು ಕಸಬಾ ಹೋಬಳಿ, ರಾಮನಗರ ಜಿಲ್ಲೆ.
ಖಾಯಂ ವಿಳಾಸ: ನಂ. 100, 2ನೇ ಕ್ರಾಸ್, ಪೃಥ್ವಿ ಗಾರ್ಡನ್ ಲೇಔಟ್, ತಗಚಗೆರೆ ಗ್ರಾ.ಪಂ. ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ಧ:

ಎದುರುದಾರರು : ನಗರಸಭಾ ಆಯುಕ್ತರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ನಗರಸಭೆ, ಚನ್ನಪಟ್ಟಣ ಟೌನ್.

ಪ್ರಕಟಣೆ

ಮೃತ ಕುಃ ಸಿ. ಮೇಘನಾ ಬಿನ್ ಚಂದ್ರಯ್ಯರವರು 1ಮತ್ತು 2ನೇ ಅರ್ಜಿದಾರರ ಮಗಳಾಗಿರುತ್ತಾರೆ. 3ರಿಂದ 5ನೇ ಅರ್ಜಿದಾರರ ತಂಗಿಯಾಗಿ ರುತ್ತಾರೆ. ಸದರಿ ಅರ್ಜಿದಾರರು ಮೃತ ಕುಃ ಸಿ. ಮೇಘನಾರವರ ಕಾನೂನುಬದ್ಧ ವಾರಸುದಾರರಾಗಿದ್ದು, ಸದರಿ ಮೃತರು ದಿನಾಂಕ: 15.11.2011 ರಂದು ರಾಮನಗರ ಜಿಲ್ಲೆ, ಚನ್ನಪಟ್ಟಣ ಟೌನ್, ಕಸಬಾ ಹೋಬಳಿ, ಹನುಮಂತ ನಗರದಲ್ಲಿ ನಿಧನರಾಗಿರುತ್ತಾರೆ. ಈ ಸಂಬಂಧ ಅರ್ಜಿದಾರರು ಸದರು ಮೃತರ ಮರಣ ಪ್ರಮಾಣಪತ್ರ ಕೋರಿ ಈ ಮೊಕದ್ದಮೆ ಹೂಡಿರುತ್ತಾರೆ. ಸದರಿ ಅರ್ಜಿಯು ದಿನಾಂಕ 20.09–2024 ರಂದು ಪ್ರಕರಣವು ವಿಚಾರಣೆಗೆ ಇದ್ದು, ಅಂದು ಯಾರಾದರೂ ತಕರಾರು ಸಲ್ಲಿಸುವವರು ಹಾಗೂ ಆಸಕ್ತಿ ಉಳ್ಳವರು ಇದ್ದರೆ, ಮಾನ್ಯ ಘನ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸುವುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದೆಂದು ತಿಳಿಯುವುದು. ದಿನಾಂಕ 21.08.2024 ರಂದು ನ್ಯಾಯಾಲಯದ ಆದೇಶ ಮತ್ತು ಅಪ್ಪಣೆ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ಬರೆಯಲಾಗಿದೆ.

ಅರ್ಜಿದಾರರ ಪರ ವಕೀಲರು
ಸ್ಥಳ: ಚನ್ನಪಟ್ಟಣ
ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರ
ನ್ಯಾಯಾಲಯ (ಕಿ.ಶ್ರೇ), ಚನ್ನಪಟ್ಟಣ.

Udayakala printed and published by **K.N.Puttalingaiah** on behalf of **Anikethana Publication and Printers** and Printed at M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 Published at no 730/A-1, VRUDDI, 2ND FLOOR, NAGARBHAVI 2ND STAGE, 11TH BLOCK BENGALURU- 560 072.**Editor: K N Puttalingaiah** (Responsible for all the news printed). All rights reserved. Reproduction in whole or in part without written permission is prohibited. RNI REG NO. 71090/97 Volume: 4 Issue: 284